# ಗೃಹಸ್ಥನ ಕರ್ತವ್ಯಗಳು


**ಸ್ವಾಮಿ ವಿವೇಕಾನಂದ**

**ಭಾ**ರತವರ್ಷದಲ್ಲಿ ಹಿಂದೆ ಇದ್ದ ನಾಲ್ಕು ಆಶ್ರಮಗಳು (ಬ್ರಹ್ಮಚರ್ಯ, ಗೃಹಸ್ಥಾಶ್ರಮ, ವಾನಪ್ರಸ್ಥಾಶ್ರಮ, ಸಂನ್ಯಾಸಾಶ್ರಮ) ಈಚೆಗೆ ಎರಡಕ್ಕಿಳಿದಿವೆ – ಗೃಹಸ್ಥಾಶ್ರಮ, ಸಂನ್ಯಾಸಾಶ್ರಮ. ಗೃಹಸ್ಥನು ಮದುವೆ ಮಾಡಿಕೊಂಡು ಪೌರನ ಕರ್ತವ್ಯಗಳನ್ನು ನಡೆಸುತ್ತಾನೆ. ಸಂನ್ಯಾಸಿಯ ಕರ್ತವ್ಯವೇನೆಂದರೆ, ಧರ್ಮಕಾರ್ಯದಲ್ಲಿ ತನ್ನ ಸರ್ವಶಕ್ತಿಯನ್ನೂ ವಿನಿಯೋಗಿಸಿ, ಈಶ್ವರೋಪಾಸನೆಯನ್ನು ಮಾಡುತ್ತ ಭಗವದ್ವಿಷಯವನ್ನು ಬೋಧಿಸುವುದು. ಈ ವಿಷಯಗಳು ಉಕ್ತವಾಗಿರುವ 'ಮಹಾನಿರ್ವಾಣ ತಂತ್ರ' ಎಂಬ ಗ್ರಂಥದಿಂದ ಕೆಲವು ವಾಕ್ಯಗಳನ್ನು ಓದುತ್ತೇನೆ. ಓರ್ವನು ಗೃಹಸ್ಥನಾಗಿದ್ದು ತನ್ನ ಕರ್ತವ್ಯಗಳನ್ನೆಲ್ಲಾ ಸಾಂಗವಾಗಿ ನೆರವೇರಿಸುವುದು ಎಷ್ಟು ಕಷ್ಟವಾದ ಕೆಲಸವೆಂಬುದನ್ನು ನೀವಿದರಿಂದ ಗ್ರಹಿಸುವಿರಿ:

**ಈಶ್ವರಪ್ರಣಿಧಾನ :** ಗೃಹಸ್ಥನು ಈಶ್ವರನಿರತನಾಗಿರಬೇಕು. ಈಶ್ವರ ಜ್ಞಾನಲಾಭವೇ ಆತನ ಧ್ಯೇಯವಾಗಿರಬೇಕು. ಆದರೂ ಆತನು ಸತತವೂ ಉದ್ಯೋಗಿಯಾಗಿರಬೇಕು. ತನ್ನ ಕರ್ತವ್ಯಗಳನ್ನೆಲ್ಲ ಮಾಡಬೇಕು. ತನ್ನ ಕರ್ಮಫಲಗಳನ್ನು ಈಶ್ವರನಿಗೆ ಅರ್ಪಿಸಬೇಕು.

**ಯಜ್ಞಭಾವನೆ:** ಕರ್ಮಮಾಡಿ ಅದರ ಫಲವನ್ನು ನಿರಾಕರಿಸು ವುದೂ, ಓರ್ವನಿಗೆ ಸಹಾಯ ಮಾಡಿ ಅವನು ತನಗೆ ಕೃತಜ್ಞ ನಾಗಿರಬೇಕೆಂದು ಚಿಂತಿಸದೆ ಇರುವುದೂ, ಏನಾದರೂ ಒಂದು ಒಳ್ಳೆಯದನ್ನು ಮಾಡಿ ಅದರಿಂದ ಹೆಸರು ಕೀರ್ತಿಗಳು ಬರುತ್ತವೆಯೋ ಇಲ್ಲವೇ ಎಂಬುದನ್ನು ಎಣಿಸದೆ ಇರುವುದೂ, ಈ ಪ್ರಪಂಚದಲ್ಲಿ ಅತ್ಯಂತ ಕಠಿಣ ಕಾರ್ಯ. ಪ್ರಪಂಚ ಹೊಗಳಿದರೆ, ಬಲು ಹೇಡಿಯೂ ಕೂಡ ಕಲಿಯಾಗುವನು. ಆದರೆ ಇತರರ ಶ್ಲಾಘನೆಯನ್ನು ಲೆಕ್ಕಿಸದೆ, ಸತತವೂ ಒಳ್ಳೆಯದನ್ನು ಮಾಡುವುದೇ ಮನುಷ್ಯ ಮಾಡಬಹುದಾದ ಪರಮ ಶ್ರೇಷ್ಠವಾದ ಯಜ್ಞ. ಜೀವನೋಪಾಯವನ್ನು ಸಂಪಾದಿಸುವುದು ಗೃಹಸ್ಥನ ದೊಡ್ಡ ಕರ್ತವ್ಯ. ಆದರೆ ಆತನು ಸುಳ್ಳು ಹೇಳುವುದರಿಂದಲೂ, ಮೋಸ ಮಾಡುವುದರಿಂದಲೂ, ಇತರರ ಸ್ವತ್ತನ್ನು ಅಪಹರಿಸುವುದ ರಿಂದಲೂ, ಅದನ್ನು ಗಳಿಸದಂತೆ ನೋಡಿಕೊಳ್ಳಬೇಕು. ತನ್ನ ಜೀವನವು ಈಶ್ವರ ಸೇವೆ, ಬಡವರ ಸೇವೆ, – ಇವಕ್ಕಾಗಿಯೇ ಎಂಬುದನ್ನು ಆತನು ಜ್ಞಾಪಕದಲ್ಲಿಡಬೇಕು.

**ತಾಯಿತಂದೆಯರ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳು :** ತಾಯಿತಂದೆಗಳು ಈಶ್ವರನ ಸಾಕ್ಷಾತ್ ಪ್ರತಿನಿಧಿ ಸ್ವರೂಪ ರೆಂಬುದನ್ನು ಗೃಹಸ್ಥನು ತಿಳಿದು, ಸತತವೂ, ಸರ್ವಪ್ರಯತ್ನ ದಿಂದಲೂ ಅವರನ್ನು ಸಂತೋಷಗೊಳಿಸಬೇಕು. ತಾಯಿತಂದೆ ಗಳಿಬ್ಬರಿಗೂ ಸಂತೋಷವಾದರೆ ದೇವರಿಗೆ ಆತನಲ್ಲಿ ಸಂತೋಷ.




ತಂದೆ ತಾಯಿಗಳಿಗೆ ಬಿರುನುಡಿಯನ್ನು ಹೇಳದ ಮಗುವೇ ನಿಜವಾಗಿಯೂ ಒಳ್ಳೆಯ ಮಗು. ತಾಯಿತಂದೆಗಳ ಎದುರಿಗೆ ಹಾಸ್ಯ ಮಾಡಕೂಡದು; ಚಾಂಚಲ್ಯವನ್ನು ತೋರಿಸಬಾರದು; ಕೋಪಗೊಳ್ಳಬಾರದು. ತಾಯಿತಂದೆಗಳ ಮುಂದೆ ಮಗುವು ಚೆನ್ನಾಗಿ ಮಣಿದು ಅವರೆದುರಿಗೆ ನಿಂತುಕೊಳ್ಳಬೇಕು. ಅವರು ಹೇಳುವವರೆಗೆ ಕುಳಿತುಕೊಳ್ಳಕೂಡದು.

ತನ್ನ ತಾಯಿತಂದೆಗಳು, ತನ್ನ ಮಕ್ಕಳು, ತನ್ನ ಹೆಂಡತಿ, ಬಡವರು ಇವರಿಗೆ ಮೊದಲು ಅನ್ನಪಾನವಸ್ತ್ರಾದಿಗಳನ್ನು ಕೊಡದೆ, ತಾನು ಮೊದಲು ಇವುಗಳನ್ನು ಸ್ವೀಕರಿಸುವ ಗೃಹಸ್ಥನು ಪಾಪವನ್ನಾಚರಿಸುವನು. ಈ ಶರೀರಕ್ಕೆ ಆತನ ತಂದೆತಾಯಿಗಳೇ ಕಾರಣರಾದುದರಿಂದ ಅವರಿಗೆ ಒಳ್ಳೆಯದನ್ನು ಮಾಡುವುದಕ್ಕಾಗಿ ಸಾವಿರಾರು ತೊಂದರೆಗಳನ್ನಾದರೂ ಆತನು ಅನುಭವಿಸಬೇಕು.

**ಹೆಂಡತಿಯ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳು :** ತನ್ನ ಹೆಂಡತಿಯ ವಿಷಯದಲ್ಲಿಯೂ ಹೀಗೆಯೇ ಆಚರಿಸಬೇಕು. ಯಾವನೇ ಆಗಲಿ ತನ್ನ ಹೆಂಡತಿಯನ್ನು ಬಯ್ಯಕೂಡದು. ಆಕೆಯು ತನ್ನ ತಾಯಿಯೆಂದೇ ಭಾವಿಸಿ ಆಕೆಯನ್ನು ಕಾಪಾಡಬೇಕು. ದೊಡ್ಡ ದುಃಖ, ತೊಂದರೆ– ಇವುಗಳಲ್ಲಿ ಸಿಕ್ಕಿಕೊಂಡಿರುವಾಗಲೂ ತನ್ನ ಹೆಂಡತಿಯ ವಿಷಯದಲ್ಲಿ ಕೋಪ ವನ್ನು ತೋರಿಸಬಾರದು. ತಾನು ಕೈಹಿಡಿದವಳ ವಿನಾ ಪರಸ್ತ್ರೀಯ ವಿಷಯವಾಗಿ ಆಲೋಚಿಸುವವನಿಗೆ, ಆಕೆಯನ್ನು ಮನಸ್ಸಿನಿಂದ ಮುಟ್ಟಿದರೂ ಸಾಕು, ಕತ್ತಲು ತುಂಬಿದ ನರಕವೇ ಗತಿ.

ಗೃಹಸ್ಥನು ತನ್ನ ಪತ್ನಿಯನ್ನು ಧನ, ವಸ್ತ್ರ, ಪ್ರೇಮ, ವಿಶ್ವಾಸ, ಸವಿನುಡಿ– ಇವುಗಳಿಂದ ಸಂತೋಷಪಡಿಸಬೇಕು. ಆಕೆಯ ಮನಸ್ಸನ್ನು ನೋಯಿಸುವ ಕಾರ್ಯವನ್ನು ಮಾಡಕೂಡದು.

ಪತಿವ್ರತೆಯಾದ ಪತ್ನಿಯನ್ನು ಹೊಂದಿದ ಗೃಹಸ್ಥನು ತನ್ನ ಧರ್ಮದಲ್ಲಿ ಸಿದ್ಧಿ ಹೊಂದುವನು. ಆತ ಸಕಲ ಸದ್ಗುಣ ಸಂಪನ್ನನಾಗಿರುವನು.

**ಮಕ್ಕಳ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳು :** ನಾಲ್ಕು ವಯಸ್ಸಿನವರೆಗೆ ಮಗನನ್ನು ಪ್ರೀತಿಯಿಂದ ಸಾಕಬೇಕು. ಹದಿನಾರನೆಯ ವಯಸ್ಸಿನವರೆಗೆ ಶಿಕ್ಷಣ ಕೊಡಬೇಕು. ಇಪ್ಪತ್ತು ವಯಸ್ಸಾದಾಗ ಮಗನು ಯಾವುದಾದರೂ ಕೆಲಸ ಹುಡುಕಿಕೊಳ್ಳಬೇಕು. ಆಗ ತಂದೆಯು ಆತನನ್ನು ಪ್ರೀತಿಯಿಂದ ತನ್ನ ಸರಿಸಮಾನನಂತೆ ಕಾಣಬೇಕು. ಇದೇ ಪ್ರಕಾರ ಮಗಳನ್ನೂ ಸಾಕಬೇಕು. ಅತ್ಯಂತ ಜಾಗರೂಕತೆಯಿಂದ ಆಕೆಗೆ ಶಿಕ್ಷಣ ಕೊಡಬೇಕು. ಅವಳು ಮದುವೆ ಮಾಡಿಕೊಂಡಾಗ ತಂದೆಯು, ಆಕೆಗೆ ಒಡವೆ ವಸ್ತುಗಳನ್ನೂ, ಧನವನ್ನೂ ಕೊಡಬೇಕು.

**ಬಂಧುಗಳ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳು :** ತರುವಾಯ ತನ್ನ ಅಣ್ಣತಮ್ಮಂದಿರು, ಅಕ್ಕತಂಗಿಯರು, ಮತ್ತವರ ಮಕ್ಕಳ ವಿಷಯದಲ್ಲೂ, ಬಡವರಾಗಿದ್ದಲ್ಲಿ, ಇತರ ಬಂಧುಗಳು, ಗೆಳೆಯರು, ಸೇವಕರು– ಇವರ ವಿಷಯದಲ್ಲೂ ಗೃಹಸ್ಥನು ತನ್ನ ಕರ್ತವ್ಯವನ್ನು ನೆರವೇರಿಸಬೇಕು. ತದನಂತರ ತನ್ನ ಹಳ್ಳಿಯ ಜನರು, ಬಡವರು, ಸಹಾಯಕ್ಕಾಗಿ ತನ್ನ ಬಳಿ ಬರುವವರು – ಇವರಲ್ಲಿಯೂ ತನ್ನ ಕರ್ತವ್ಯಗಳನ್ನು ನಡೆಯಿಸಬೇಕು. ಬೇಕಾದಷ್ಟು ಆದಾಯವಿದ್ದು ತನ್ನ ಬಂಧುಬಳಗದವರಿಗೂ ಬಡವರಿಗೂ ಏನನ್ನೂ ಕೊಡದ ಗೃಹಸ್ಥನನ್ನು ಪಶುಮಾತ್ರನೆಂದು ತಿಳಿ, ಆತ ಮನುಷ್ಯನಲ್ಲ.

**ಶತ್ರುಗಳ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳು:** ತನ್ನ ಶತ್ರುಗಳ ವಿಷಯದಲ್ಲಿ ಗೃಹಸ್ಥನು ಶೂರನಂತೆ ವರ್ತಿಸಬೇಕು. ಶತ್ರುವನ್ನು ನಿರೋಧಿಸಬೇಕು. ಅದು ಗೃಹಸ್ಥನ ಕರ್ತವ್ಯ. ಮೂಲೆಯಲ್ಲಿ ಅಳುತ್ತ ಕುಳಿತು ಅಪ್ರತೀಕಾರ, ಅಹಿಂಸೆಗಳ ವಿಷಯವಾಗಿ ಅಸಂಬದ್ಧ ಪ್ರಲಾಪ ಮಾಡಕೂಡದು. ತನ್ನ ಶತ್ರುಗಳಿಗೆ ತಾನು ಶೂರನೆಂದು ಗೃಹಸ್ಥನು ತೋರಿಸದೆ ಇದ್ದಲ್ಲಿ, ಆತನು ತನ್ನ ಕರ್ತವ್ಯವನ್ನು ಮಾಡಿದಂತಾಗದು. ಆದರೆ, ತನ್ನ ಸ್ನೇಹಿತರು ಮತ್ತು ಬಂಧುಗಳ ವಿಷಯದಲ್ಲಿ ಕುರಿಮರಿಯಂತೆ ಸಾಧುವಾಗಿರಬೇಕು.

**ದುಷ್ಟರ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳು :** ದುಷ್ಟರಿಗೆ ಮರ್ಯಾದೆ ಮಾಡದೆ ಇರುವುದು ಗೃಹಸ್ಥನ ಕರ್ತವ್ಯ. ಏಕೆಂದರೆ ಈ ಪ್ರಪಂಚದಲ್ಲಿ ಕೆಟ್ಟವರಿಗೆ ಮನ್ನಣೆ ತೋರಿಸಿದರೆ, ಕೆಟ್ಟದುದಕ್ಕೆ ಆಶ್ರಯ ಕೊಟ್ಟಂತಾಗುತ್ತದೆ. ಗೌರವಕ್ಕೆ ಯೋಗ್ಯರಾದವರನ್ನೂ ಸಾಧುಶೀಲರನ್ನೂ ಆತ ಅಲಕ್ಷ್ಯ ಮಾಡುವುದು ದೊಡ್ಡ ತಪ್ಪು.

**ಸ್ನೇಹಿತರ ವಿಷಯದಲ್ಲಿ ಮಾಡಬೇಕಾದ ಕರ್ತವ್ಯಗಳು :** ಗೆಳೆತನದಲ್ಲಿ ಅತಿರೇಕ ಇರಕೂಡದು. ಎಲ್ಲೆಲ್ಲಿಯೂ ತಾನಾಗಿಯೇ ಮುಂದೆ ಬಿದ್ದು ಗೆಳೆಯರನ್ನು ಮಾಡಿಕೊಳ್ಳಕೂಡದು. ಯಾರ ಸ್ನೇಹ ಮಾಡಿಕೊಳ್ಳಬೇಕೆಂಬ ಇಚ್ಛೆ ಇರುವುದೋ ಅವರ ಚರ್ಯೆಗಳನ್ನೂ, ಅವರು ಇತರರೊಡನೆ ನಡೆಸುವ ವ್ಯವಹಾರಗಳನ್ನೂ ಪರೀಕ್ಷಿಸಿ, ವಿಚಾರ ಮಾಡಿ, ತರುವಾಯ ಅವರ ಸ್ನೇಹವನ್ನು ಬೆಳೆಸಬೇಕು.

**ಕೋ ಗೃಹೇಷು ಪುಮಾನ್ ಸಕ್ತಮಾತ್ಮಾನಮಜಿತೇಂದ್ರಿಯಃ ।**
**ಸ್ನೇಹಪಾಶೈಃ ದೃಢೈಃ ಬದ್ಧಮುತ್ಸಹೇತ ವಿಮೋಚಿತುಮ್ ॥**
**(ಭಾಗವತ: ೭–೬–೯)**

*ಭಾವಾನುವಾದ :* **ಗೃಹಸ್ಥನಾದವನು ಕೂಡ ತನ್ನ ಇಂದ್ರಿಯಗಳನ್ನು ಸಂಯಮದಲ್ಲಿ ಇಟ್ಟುಕೊಳ್ಳಬೇಕು. ಇಲ್ಲದಿದ್ದರೆ ಆಸಕ್ತಿಯೆಂಬ ಪಾಶ ಅವನನ್ನು ಕಟ್ಟಿಹಾಕುತ್ತದೆ ಮತ್ತು ನಂತರ ಅದರಿಂದ ಬಿಡಿಸಿಕೊಳ್ಳಲು ಅವನಿಗೆ ಸಾಧ್ಯವಾಗುವುದಿಲ್ಲ.**

**ಯಾವುದನ್ನು ಕುರಿತು ಬಾಯಿ ತೆರೆಯಬಾರದು? :** ಈ ಮೂರನ್ನು ಕುರಿತು ಗೃಹಸ್ಥನು ಬಾಯಿ ತೆರೆಯಬಾರದು: ಗುಂಪಿನ ಮುಂದೆ ತನ್ನ ಖ್ಯಾತಿಯನ್ನು ಕುರಿತು ಮಾತನಾಡಬಾರದು; ತನ್ನ ಹೆಸರನ್ನಾಗಲಿ, ತನ್ನ ಶಕ್ತಿಗಳನ್ನಾಗಲೀ ಹೊರಪಡಿಸಕೂಡದು; ತನ್ನ ಐಶ್ವರ್ಯ, ಅಥವಾ ತನಗೆ ತಿಳಿದಿರುವ ಗುಟ್ಟು, ಇವುಗಳನ್ನು ಕುರಿತು ಬಾಯಿ ಬಿಡಬಾರದು.

ತಾನು ಬಡವನೆಂದಾಗಲೀ, ಹಣವಂತನೆಂದಾಗಲೀ ಹೇಳಕೂಡದು. ತನ್ನ ಸಂಪತ್ತಿನ ವಿಷಯವಾಗಿ ಬಡಾಯಿ ಕೊಚ್ಚಬಾರದು. ತನ್ನ ಅಭಿಪ್ರಾಯವನ್ನು ತನ್ನಲ್ಲೇ ಇಟ್ಟುಕೊಂಡಿರಬೇಕು. ಇದು ಆತನ ಧಾರ್ಮಿಕ ಕರ್ತವ್ಯ. ಇದೇನು ಬರಿಯ ಪ್ರಾಪಂಚಿಕ ಅಥವಾ ವ್ಯವಹಾರಜ್ಞಾನ ಮಾತ್ರವಲ್ಲ. ಹೀಗೆ ಮಾಡದಿದ್ದಲ್ಲಿ ಆತನನ್ನು ಅನೀತಿವಂತನೆಂದು ಭಾವಿಸಬೇಕಾಗಿ ಬರಬಹುದು.

**ಗೃಹಸ್ಥನ ಗತಿ:** ಪರಮಯೋಗಿಗೆ ಯಾವ ಗತಿ ಪ್ರಾಪ್ತವಾಗುವುದೋ ಆ ಗತಿಯೇ ಕೆರೆ ಕಟ್ಟಿಸುವುದರಿಂದಲೂ, ರಸ್ತೆಗಳ ಪಕ್ಕದಲ್ಲಿ ಸಾಲುಮರ ಬೆಳೆಸುವುದರಿಂದಲೂ, ಮನುಷ್ಯರಿಗೂ ಪ್ರಾಣಿಗಳಿಗೂ ವಿಶ್ರಮಿಸುವುದಕ್ಕಾಗಿ ಛತ್ರವನ್ನು ಕಟ್ಟಿಸುವುದರಿಂದಲೂ ರಸ್ತೆ ಮಾಡಿಸುವುದರಿಂದಲೂ ಸೇತುವೆಗಳನ್ನು ಕಟ್ಟಿಸುವುದರಿಂದಲೂ ಗೃಹಸ್ಥನಿಗೆ ಉಂಟಾಗುತ್ತದೆ.

ಕರ್ಮಯೋಗದ ಒಂದು ಭಾಗವಿದು–ಕ್ರಿಯೆ. ಇದು ಗೃಹಸ್ಥನ ಕರ್ತವ್ಯ. ಮುಂದೆ ಒಂದು ವಾಕ್ಯವಿದೆ. ಅದೇನೆಂದರೆ, "ಗೃಹಸ್ಥನು ತನ್ನ ದೇಶಕ್ಕಾಗಿ ಅಥವಾ ತನ್ನ ಧರ್ಮಕ್ಕಾಗಿ ಯುದ್ಧದಲ್ಲಿ ಮಡಿದರೆ, ಯೋಗಿಯು ಧ್ಯಾನದಿಂದ ಯಾವ ಪದವಿಯನ್ನು ಪಡೆಯುವನೋ ಅದನ್ನೇ ಅವನೂ ಹೊಂದುವನು." ಇದು ಏನನ್ನು ತೋರಿಸುತ್ತದೆಯೆಂದರೆ, ಒಬ್ಬನ ಕರ್ತವ್ಯ ಮತ್ತೊಬ್ಬನದಲ್ಲ. ಹಾಗೆಯೇ ಈ ಕರ್ತವ್ಯ ಕೀಳು, ಈ ಕರ್ತವ್ಯ ಮೇಲು ಎಂದು ಹೇಳುವಂತಿಲ್ಲ. ಪ್ರತಿಯೊಂದು ಕರ್ತವ್ಯಕ್ಕೂ ಅದರ ಸ್ಥಾನವಿದ್ದೇ ಇರುತ್ತದೆ. ಆದ್ದರಿಂದ ನಮ್ಮ ಪರಿಸ್ಥಿತಿಗಳಿಗೆ ಅನುಸಾರವಾಗಿ ನಾವು ಕರ್ತವ್ಯಗಳನ್ನು ಮಾಡಬೇಕು. ■